# ಕದಡಿದ ಕೊಳದಲ್ಲಿ ತಾವರೆ ಚೆಲ್ಲಾಪಿಲ್ಲಿ

ಅಧ್ಯಾಯ–1

ನಿವೇದಿತಾಳಿಗೆ ಅನಿರೀಕ್ಷಿತವಾಗಿ ಆಗಮಿಸಿದ ತನ್ನ ಹೆತ್ತವರನ್ನು ಕಂಡು ಸಂಭ್ರಮದ ಜೊತೆಗೆ ಆಶ್ಚರ್ಯವೂ ಉಂಟಾಯಿತು, ‘ಇದೇನಪ್ಪಾ... ಇದ್ದಕಿದ್ದ ಹಾಗೆ? ಫೋನ್ ಕೂಡಾ ಮಾಡ್ದೇ... ಬನ್ನಿ ಒಳಗೆ... ನನಗೂ ನಿಮ್ಮನ್ನು ನೋಡ್ಬೇಕು ಅಂತ ಅನ್ನಿಸ್ತಾ ಇತ್ತು. ನೀವೇ ಬಂದಿದ್ದು ಒಳ್ಳೇದಾಯಿತು...’

ಮಗಳ ಮುಖದಲ್ಲಿ ಮೂಡಿದ ತಿಳಿನಗೆ, ಅವಳು ಸಹಜವಾಗಿರುವುದನ್ನು ಕಂಡು ಅವರು ಹೃದಯದ ಮೇಲೆ ಹೊತ್ತು ತಂದಿದ್ದ ಕಳವಳದ ಹೊರೆ ತುಸು ಇಳಿಮುಖವಾಯಿತು. ಇಬ್ಬರೂ ಪರಸ್ಪರ ಮುಖ ನೋಡಿಕೊಂಡಾಗ ನಿವೇದಿತಾಳಿಗೆ ಅನುಮಾನವಾಯಿತು, ‘ಯಾಕಪ್ಪಾ..? ಎಲ್ಲಾ ಸರಿಯಾಗಿದೆ ತಾನೇ..?’. ತಾವು ಕೇಳಬೇಕಾದ ಪ್ರಶ್ನೆಯನ್ನು ಮಗಳೇ ಕೇಳುತ್ತಿರುವುದನ್ನು ಕಂಡು ಅವರಿಗೆ ಏನನ್ನಬೇಕೋ ತಿಳಿಯದಾಯಿತು. ಅಳಿಯ ಕರೆ ಮಾಡಿ, ‘ಕೂಡಲೇ ಹೊರಟು ಬನ್ನಿ... ನಿಮ್ಹತ್ರ ಅರ್ಜೆಂಟಾಗಿ ಮಾತನಾಡಬೇಕು. ನಿವೇದಿತಾಳಿಗೇನೂ ಕೇಳಬೇಡಿ... ಕಾರು ಕಳಿಸ್ತಾ ಇದ್ದೀನಿ. ಅಗತ್ಯದ ವಿಚಾರ ಮಾತನಾಡುವುದಿದೆ...’ ಎಂದು ಗಂಭೀರ ದನಿ ಹೊರಡಿಸಿದಾಗ ಕೇಶವರಿಗೆ ಎದೆಯಲ್ಲಿ ಭತ್ತ ಕುಟ್ಟಿದಂತನ್ನಿಸಿ ಭಯವುಂಟಾಗಿತ್ತು. ‘ಮಗಳಿಗೆ ಮದುವೆಯಾಗಿ ಎರಡು ವರ್ಷಗಳಾಗುತ್ತಿದೆಯಷ್ಟೇ... ಏನೀ ಅಪಸ್ವರ?’ ಎನಿಸಿತ್ತು.

‘ಏನು ವಿಷಯ ಪ್ರದೀಪ? ಎಲ್ಲಾ ಸರಿಯಾಗಿದೆ ತಾನೇ?’ ತಮ್ಮ ಆತಂಕಕ್ಕೆ ಸಹಜತೆಯ ಲೇಪನ ನೀಡುತ್ತ ಪ್ರಶ್ನಿಸಿದರು. ಪ್ರದೀಪ ಏನೂ ಬಿಡಿಸಿ ಹೇಳದೇ, ‘ಇಲ್ಲಿಗೆ ಬಂದಾಗ ತಿಳಿಸ್ತೀನಿ. ಬರುತ್ತಾ ಅತ್ತೇನ್ನೂ ಕರ್ಕೊಂಡು ಬನ್ನಿ...’ ಎಂದಷ್ಟೇ ಗಂಭೀರವಾಗಿ ನುಡಿದಿದ್ದ. ಅದನ್ನು ಆಲಿಸಿದ ಬಳಿಕವಂತೂ ಕೇಶವರಿಗೆ ತಳಮಳ ಮೇರೆ ಮೀರಿತ್ತು. ಪತ್ನಿ ವೀಣಾರ ಬಳಿ ಅಳಿಯನ ಕರೆಯ ವಿವರ ತಿಳಿಸಿ ಆತಂಕ ತೋಡಿಕೊಂಡರು, ‘ಅವನ ಸ್ವರ ಎಂದಿನಂತಿರಲಿಲ್ಲ... ಅಳಿಯಂದ್ರು ಮಾತನಾಡಿದ್ದು ಕೇಳಿದ್ರೆ ಏನೋ ನಡೆಯಬಾರದ್ದು ನಡೆದಿದೆ ಅನ್ನಿಸ್ತಿದೆ ವೀಣಾ... ‘ಕೂಡಲೇ ಹೊರಟು ಬನ್ನಿ.. ನಿವಿಯ ಬಳಿ ಏನೂ ಹೇಳಬೇಡಿ’ ಎಂದು ಬೇರೆ ಹೇಳ್ತಿದ್ದಾನೆ... ಏನು ಸಮಾಚಾರ ಗೊತ್ತಿಲ್ಲ. ನಂಗ್ಯಾಕೋ ಭಯವಾಗ್ತಿದೆ...’

ಪತಿಯಿಂದ ವಿಚಾರ ತಿಳಿದು ವೀಣಾ ಕೂಡಾ ಆತಂಕಗೊಂಡರು. ‘ಹಿಂದೆಂದೂ ಹೀಗಾಗಿಲ್ಲ... ಮೊಮ್ಮಗಳಿಗೆ ಆರಾಮಿಲ್ವೋ ಏನೋ... ಹಾಗೆ ಅಸೌಖ್ಯವಾಗಿದ್ದರೆ ನಿವಿಯೇ ಫೋನ್ ಮಾಡಿ ತಿಳಿಸ್ತಿದ್ಲು...’ ಅವರ ಮುಖದಲ್ಲೂ ಚಿಂತೆಯ ಗೆರೆಗಳು ದಟ್ಟವಾದವು. ಅವರು ಹೊರಟು ನಿಲ್ಲುತ್ತಲೇ ಪ್ರದೀಪ ಕಳಿಸಿದ ಕಾರು ಅವರ ಮನೆ ಬಾಗಿಲ ಮುಂದೆ ನಿಂತಿತ್ತು. ಮನೆಗೆ ಬೀಗ ಜಡಿದು ಹತ್ತಿ ಕುಳಿತವರಿಗೆ ಮುಳ್ಳ ಮೇಲೆ ಕುಳಿತಂತೆ ಚಡಪಡಿಕೆ ಕಾಡಿತ್ತು. ಇಲ್ಲಿ

